**ಸಾಕ್ಷಿಗೆ ದಿನಾಂಕಃ 21.01.2026 ರಂದು ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಎಸ್.ಜೆ. ವಕೀಲರಿಂದಃ**

ನನಗೆ ಓದಲು ಬರೆಯಲು ಬರುವುದಿಲ್ಲ. ನನ್ನ ಮಕ್ಕಳು ಎಸ್.ಎಸ್.ಎಲ್.ಸಿ.ಯವರೆಗೆ ಓದಿರುತ್ತಾರೆ. ಕಾಗದ ಪತ್ರಗಳನ್ನು ನನ್ನ ಮಕ್ಕಳಿಂದ ಓದಿಸಿ ತಿಳಿದುಕೊಳ್ಳುವುದಿಲ್ಲ. ವಾದಿಯು ಗುರುಬಸಪ್ಪ ಉರುಫ್ ಮರಿಗಂಡಪ್ಪನ ಮಗ ಎಂದರೆ ಸರಿ. ವಾದಿಯ ಸಹೋದರಿ ನನ್ನ ಹೆಂಡತಿ ಎಂದರೆ ಸರಿ. ವಾದಿಯ ತಂಗಿ ಪ್ರೇಮ ಚಿಕ್ಕಮುಲಗೂಡಿನಲ್ಲಿ ವಾಸವಿರುತ್ತಾರೆ. ವಾದಿ ಮತ್ತು ಅವರ ತಂದೆಗೆ ಯರಗನಹಳ್ಳಿ ಗ್ರಾಮದಲ್ಲಿ ಜಮೀನುಗಳು ಇರುತ್ತವೆ ಎಂದರೆ ನನಗೆ ಗೊತ್ತಿಲ್ಲ.

ಅಸಲು ದಾವಾ ಸಂ.306/2012 ನ್ನು ನನ್ನ ಹೆಂಡತಿ ಮತ್ತು ನಾದಿನಿ ಪ್ರೇಮ ವಿಭಾಗವನ್ನು ಕೋರಿ ವಾದಿಯ ವಿರುದ್ಧ ಸಲ್ಲಿಸಿದ್ದರು ಎಂದರೆ ಸರಿ. ಈ ದಾವೆಯ ವಿಚಾರಗಳನ್ನು ನಾನು ತಿಳಿದುಕೊಂಡಿರುತ್ತೇನೆ. ಸದರಿ ದಾವೆಯಲ್ಲಿ ಈ ದಾವಾ ಸ್ವತ್ತು ಇರುವುದಿಲ್ಲ ಎಂದರೆ ಸರಿ. ಸದರಿ ದಾವೆಯಲ್ಲಿ ಡಿಕ್ರಿಯಾದ ಸ್ವತ್ತುಗಳ ಸ್ವಾಧೀನವನ್ನು ಪಡೆದಿರುವುದಿಲ್ಲ ಎಂದರೆ ಸರಿ. 1981 ರಲ್ಲಿ ಗುರುಬಸಪ್ಪ ಉರುಫ್ ಮರಿಗಂಡಪ್ಪ ಬದುಕಿದ್ದಾಗ ಅವರು ಮತ್ತು ಅವರ ಮಗನ ನಡುವೆ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಕಿರಗಸೂರಿನಲ್ಲಿರುವ ಸ್ವತ್ತನ್ನು ವಾದಿಯ ತಂದೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತನ್ನು ಅಸಲು ದಾವಾ ಸಂ.306/2012 ರಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ.

ಸರ್ವೆ ನಂ.14/2 ರಲ್ಲಿ ನನಗೆ ಪೂರ್ವ- ಪಶ್ಚಿಮ 20 ಅಡಿ ಮತ್ತು ದಕ್ಷಿಣ-ಉತ್ತರ 30 ಅಡಿ ಖಾಲಿ ಜಾಗ ನನಗೆ ವಾದಿಯ ತಂದೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಅದು ನಿ.ಪಿ.1 ಆಗಿರುತ್ತದೆ. ಸದರಿ ಸ್ವತ್ತು ಸರ್ವೆ ನಂ.14/2 ರ ಪೂರ್ವ ಭಾಗದಲ್ಲಿ ಬರುತ್ತದೆ. ಉಳಿದ ಸ್ವತ್ತನ್ನು ಬಾಯಿ ಮಾತಿನ ಮೂಲಕ ವಾದಿಯ ತಂದೆ ವಾದಿಗೆ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ.1 ರ ಜಾಗದಲ್ಲಿ ಫ್ಲೋರ್ ಮಿಲ್ ಮತ್ತು ಅಲ್ಲರ್ ಮಿಲ್ ನ್ನು ಇಟ್ಟಿರುತ್ತೇನೆ. ಅದಕ್ಕೆ ಸಂಬಂಧಿಸಿದಂತೆ ಪಂಚಾಯಿತಿಯಿಂದ ಪರವಾನಗಿಯನ್ನು ಮತ್ತು ನಕಾಶೆಯನ್ನು ಪಡದಿರುತ್ತೇನೆ. ಪರವಾನಗಿಯಲ್ಲಿ ಉಳಿಕೆ ಜಾಗ ವಾದಿಗೆ ಸೇರಿರುತ್ತದೆ ಎಂದು ನಮೂದು ಇರುತ್ತದೆ ಎಂದರೆ ಸರಿಯಲ್ಲ. ಸದರಿ ವಿಚಾರ ತಿಳಿಯುತ್ತದೆ ಎನ್ನುವ ಕಾರಣದಿಂದ ಅವುಗಳನ್ನು

ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಪರವಾನಗಿ ಮತ್ತು ನಕಾಶೆಯನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ. ಕಂದಾಯವನ್ನು ಪಾವತಿ ಮಾಡುತ್ತಿದ್ದೇನೆ. ಸತ್ಯಾಂಶ ತಿಳಿಯುತ್ತದೆ ಎನ್ನುವ ಕಾರಣದಿಂದ ಸದರಿ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ವಾದಿಯ ತಂದೆ ಬದುಕಿದ್ದಾಗ ವಾದಿಯ ಜೊತೆ ವಾಸವಿದ್ದರು ಎಂದರೆ ಸರಿ. ಅವರ ಉತ್ತರ ಕ್ರಿಯಾದಿಗಳನ್ನು ವಾದಿಯು ನೆರವೇರಿಸಿರುತ್ತಾರೆ ಎಂದರೆ ಸರಿ. ವಾದಿಯು ಗ್ರಾಮದಲ್ಲಿ ಇಲ್ಲದೆ ಇರುವಾಗ ನಾವುಗಳು 'ಬಿ' ದಾವಾ ಸ್ವತ್ತನ್ನು ಒತ್ತುವರಿ ಮಾಡಿ ಕಟ್ಟಡವನ್ನು ವಿಸ್ತರಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ 'ಎ' ಸ್ವತ್ತಿನ ಪಶ್ಚಿಮ ಭಾಗದಲ್ಲಿ ವಾದಿಯ ಜಾಗವನ್ನು ಒತ್ತುವರಿ ಮಾಡಿ ನೀರಿನ ತೊಂಬೆಯನ್ನು ನಿರ್ಮಿಸಿರುತ್ತೇನೆ ಎಂದರೆ ಸರಿಯಲ್ಲ. ವಾದಿಯು ತನ್ನ ಜಾಗದಲ್ಲಿ ನೀರಿನ ತೊಂಬೆಯನ್ನು ನಿರ್ಮಿಸಲು ಸಮ್ಮತಿ ನೀಡಿದ ಮೇರೆಗೆ ನಿರ್ಮಿಸಿರುತ್ತೇನೆ. ವಾದಿಯು ನಮ್ಮನ್ನು ಭೇಟಿ ಮಅಡಿ ಒತ್ತುವರಿ ಯಾದ ಜಾಗವನ್ನು ಬಿಟ್ಟು ಕೊಡಿ ಎಂದು ಕೇಳಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ 2 ನೇ ಪ್ರತಿವಾದಿಯನ್ನು ಬೇಟಿ ಮಾಡಿ ನೀರಿನ ತೊಂಬೆಯ್ನುನು ಹೊಡೆದು ಹಾಕಲು ಕೇಳಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಮತ್ತು 2 ನೇ ಪ್ರತಿವಾದಿಗೆ ನೋಟಿಸನ್ನು ವಾದಿಯು ನೀಡಿರುತ್ತಾರೆ ಎಂದರೆ ಸರಿಯಲ್ಲ. ನೋಟಿಸನ್ನು ನಾನು ಪಡೆದಿರುವುದಿಲ್ಲ.

ಸಾಕ್ಷಿಗೆ ನಿ.ಪಿ.5 ನ್ನು ತೋರಿಸಲಾಗಿ ಅದರಲ್ಲಿರುವುದು ನನ್ನ ಸಹಿ ಎಂದು ಒಪ್ಪಿರುತ್ತಾರೆ. ವಕೀಲರ ನೋಟಿಸಿಗೆ ಪ್ರತ್ಯುತ್ತರ ನೀಡಿರುತ್ತೇನೆ. ಪ್ರತ್ಯುತ್ತರ ನೊಟಿಸಿನಲ್ಲಿರುವುದನ್ನು ನಾನು ತಿಳಿದುಕೊಂಡಿರುವುದಿಲ್ಲ. ಒತ್ತುವರಿ ಜಾಗವನ್ನು ತೆರವು ಮಾಡದ ಕಾರಣ ವಾದಿಯು ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಸರ್ವೆಯವರನ್ನು ನೇಮಕ ಮಾಡಿದ್ದರು ಎಂದರೆ ಸರಿ. ಸರ್ವೆಯವರು ನನಗೆ ನೋಟಿಸನ್ನು ನೀಡಿದ್ದರು ಎಂದರೆ ಸರಿ. ಸದರಿಯವರು ಅಳತೆಯನ್ನು ಮಾಡಿರುತ್ತಾರೆ ಎಂದರೆ ಸರಿ. ಅಳತೆ ಮಾಡುವಾಗ ನಾನು ಹಾಜರಿರಲಿಲ್ಲ. ಅಳತೆ ಮಾಡುವಾಗ ನಾನು ಹಾಜರಿದ್ದರೂ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆಯುಕ್ತರ ವರದಿಯನ್ನು ನಾನು ತಿಳಿದುಕೊಂಡಿರುತ್ತೇನೆ. ಸದರಿ ವರದಿಯಲ್ಲಿ ಅಕ್ರಮವಾಗಿ ನಾವುಗಳು ಕಟ್ಟಡವನ್ನು ಮತ್ತು ನೀರಿನ ತೊಂಬೆಯನ್ನು ನಿರ್ಮಿಸಿರುತ್ತೇವೆ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ.1 ರ ಜಾಗದಲ್ಲಿ ಮಿಲ್, ನೀರಿನ ತೊಂಬೆ ಮತ್ತು ಒತ್ತುವರಿ ಕಟ್ಟಡವನ್ನು ಹೊರತುಪಡಿಸಿ ಬೇರೇನೂ ಇರುವುದಿಲ್ಲ ಎಂದರೆ ಸರಿಯಲ್ಲ.

ನಾವುಗಳು ವಾದಿಯ ಜಾಗವನ್ನು ಒತ್ತುವರಿ ಮಾಡಿ ಕಟ್ಟಡ ನಿರ್ಮಿಸಿದ್ದು, ಅದನ್ನು ಬಿಟ್ಟುಕೊಡಬೇಕಾಗುತ್ತದೆ ಎನ್ನುವ ಕಾರಣದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ 'ಬಿ' ಸ್ವತ್ತನ್ನು ಅಕ್ರಮವಾಗಿ ಒತ್ತುವರಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ವಾದಿಯು ದಾವಾ 'ಎ' ಸ್ವತ್ತಿನ ಮಾಲಿಕರು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.**